# ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯ, ವಿಜಯಪುರ-586108

**KARANATAKA STATE AKKAMAHADEVI WOMEN UNIVERSITY, VIJAYAPURA-586108**

(ಹಿಂದಿನ ಪದನಾಮ: ಕರ್ನಾಟಕ ರಾಜ್ಯ ಮಹಿಳಾ ವಿಶ್ವವಿದ್ಯಾಲಯ, ವಿಜಯಪುರ)

ಕುಲಸಚಿವರ ಕಛೇರಿ
ಜ್ಞಾನಶಕ್ತಿ ಆವರಣ ತೊರವಿ

Web Site: www.kswu.ac.in

Office of the Registrar
Jnanashakti Campus Torvi

ಸಂಖ್ಯೆ:ಕರಾಅಮವಿವಿ/ಶೈವಿ/ಸ್ನಾಪ್ರಅ/2025-26/1544

ದಿನಾಂಕ: 30-09-2025

## ಉಳಿಕೆ ಸೀಟುಗಳಿಗೆ ಪ್ರವೇಶಾತಿ ಅಧಿಸೂಚನೆ

ವಿಷಯ: ವಿವಿಧ ಸ್ನಾತಕೋತ್ತರ ಕೋರ್ಸುಗಳ ಉಳಿಕೆ ಸೀಟುಗಳ ಪ್ರವೇಶಾತಿಗೆ ಅರ್ಜಿ ಆಹ್ವಾನಿಸುವ ದಿನಾಂಕವನ್ನು ವಿಸ್ತರಿಸುವ ಕುರಿತು.

ಉಲ್ಲೇಖ:
1) ಕರಾಅಮವಿವಿ/ ಶೈವಿ/ಸ್ನಾಪ್ರಅ/2025-26/827 ದಿನಾಂಕ: 15-07-2025
2) ಕರಾಅಮವಿವಿ/ ಶೈವಿ/ಸ್ನಾಪ್ರಅ/2025-26/1137 ದಿನಾಂಕ: 13-08-2025
3) ಕರಾಅಮವಿವಿ/ ಶೈವಿ/ಸ್ನಾಪ್ರಅ/2025-26/1212 ದಿನಾಂಕ: 26-08-2025
4) ಕರಾಅಮವಿವಿ/ ಶೈವಿ/ಸ್ನಾಪ್ರಅ/2025-26/1300 ದಿನಾಂಕ: 03-09-2025
5) ಮಾನ್ಯ ಕುಲಪತಿಗಳ ಅನುಮೋದನೆಯ ದಿನಾಂಕ: 29-09-2025

ಮೇಲ್ಕಾಣಿಸಿದ ವಿಷಯ ಮತ್ತು ಉಲ್ಲೇಖಗಳನ್ವಯ 2025-26 ನೆಯ ಸಾಲಿಗಾಗಿ ವಿವಿಧ ಸ್ನಾತಕೋತ್ತರ, ಸ್ನಾತಕೋತ್ತರ ಡಿಪ್ಲೋಮಾ, ಬಿ.ಪಿಎಡ್, ಸರ್ಟಿಫಿಕೇಟ್, ಮತ್ತು ವ್ಯಾಲ್ಯು ಆ್ಯಡೆಡ್ ಸರ್ಟಿಫಿಕೇಟ್/ ಡಿಪ್ಲೋಮಾ/ ಅಡ್ವಾನ್ಸ್ಡ್ ಡಿಪ್ಲೋಮಾ ಕೋರ್ಸುಗಳ ಪ್ರವೇಶಾತಿಗೆ UUCMS (online) ನಲ್ಲಿ ಅರ್ಜಿಗಳನ್ನು ಆಹ್ವಾನಿಸಲಾಗಿತ್ತು. ಮುಂದುವರೆದು, ಸ್ನಾತಕೋತ್ತರ ಅಧ್ಯಯನ ವಿಭಾಗಗಳಲ್ಲಿ ಪ್ರವೇಶಾತಿ ಸೀಟುಗಳು ಇನ್ನೂ ಕೆಲವು ವಿಭಾಗಗಲ್ಲಿ ಉಳಿಕೆಯಾಗಿರುತ್ತವೆ, ವಿದ್ಯಾರ್ಥಿನಿಯರ ಶೈಕ್ಷಣಿಕ ಹಿತದೃಷ್ಟಿಯಿಂದ ಉಳಿಕೆ ಸೀಟುಗಳಿಗೆ ದಿನಾಂಕ: **29-09-2025** ರಿಂದ **15-10-2025**ರ ವರೆಗೆ ವಿಸ್ತರಿಸಲಾಗಿದೆ. ಅರ್ಹ ಮಹಿಳಾ ಅಭ್ಯರ್ಥಿಗಳು ಇದರ ಸದುಪಯೋಗ ಪಡೆದುಕೊಳ್ಳಬಹುದು.

ಸೂಚನೆಗಳು

1) ನೇರವಾಗಿ ಆಯಾ ವಿಭಾಗದ ಮುಖ್ಯಸ್ಥರು/ಸಂಯೋಜಕರುಗಳು, ವಿಶೇಷಾಧಿಕಾರಿಗಳು, ನಿರ್ದೇಶಕರು, ಹಾಗೂ ಮಹಿಳಾ ಮಹಾವಿದ್ಯಾಲಯದ ಪ್ರಾಂಶುಪಾಲರುಗಳನ್ನು ಸಂಪರ್ಕಿಸಿ ಪ್ರವೇಶಾತಿಯನ್ನು ಪಡೆದುಕೊಳ್ಳಬಹುದಾಗಿದೆ.
2) ಆಸಕ್ತಿಯುಳ್ಳ ಅರ್ಹ ಮಹಿಳಾ ಅಭ್ಯರ್ಥಿಗಳು UUCMS Portalನ (ಆನ್‌ಲೈನ) ಮೂಲಕ ಸಾಮಾನ್ಯ ಅಭ್ಯರ್ಥಿಗಳು 400/- ರೂ ಗಳ ಅರ್ಜಿ ಶುಲ್ಕದೊಂದಿಗೆ, ಎಸ್.ಸಿ/ಎಸ್.ಟಿ ಮತ್ತು ಪ್ರವರ್ಗ-Iರ ಅಭ್ಯರ್ಥಿಗಳು 200/-ರೂ ಗಳ ಅರ್ಜಿ ಶುಲ್ಕದೊಂದಿಗೆ ಪ್ರವೇಶ ಅರ್ಜಿಗಳನ್ನು ಸಲ್ಲಿಸುವುದು ಕಡ್ಡಾಯ.
3) ಪ್ರಾದೇಶಿಕ ಕೇಂದ್ರ ಬೀದರ, ಸ್ನಾತಕೋತ್ತರ ಅಧ್ಯಯನ ಕೇಂದ್ರ ಸಿಂಧನೂರ, ಉಡುತಡಿ ಹಾಗೂ ಮಂಡ್ಯ ಹೊರಾವರಣ ಕೇಂದ್ರಗಳಲ್ಲಿ ಪ್ರವೇಶಾತಿ ಬಯಸುವ ವಿದ್ಯಾರ್ಥಿನಿಯರು ಆಯಾ ಕೇಂದ್ರಗಳ ನಿರ್ದೇಶಕರು, ವಿಶೇಷಾಧಿಕಾರಿಗಳು, ಸಂಯೋಜಕರುಗಳನ್ನು ಸಂಪರ್ಕಿಸಿ ಪ್ರವೇಶಾತಿ ಪಡೆದುಕೊಳ್ಳಬಹುದು.
4) ಶೈಕ್ಷಣಿಕ ವೇಳಾಪಟ್ಟಿಯಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ ಮತ್ತು ಸದರಿ ವಿದ್ಯಾರ್ಥಿನಿಯರಿಗೆ ವಿಶೇಷ ತರಗತಿಗಳನ್ನು ತೆಗೆದುಕೊಂಡು ಪಠ್ಯಕ್ರಮನ್ನು ಪೂರ್ಣಗೊಳಿಸುವುದು.

For ಕುಲಸಚಿವರು 30/09/25
ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯ
ವಿಜಯಪುರ

ಇವರಿಗೆ

1) ಮುಖ್ಯಸ್ಥರು/ಸಂಯೋಜಕರು ಸ್ನಾತಕೋತ್ತರ ಅಧ್ಯಯನ ವಿಭಾಗಗಳು ಕರಾಅಮವಿ, ವಿಜಯಪುರ.
2) ನಿರ್ದೇಶಕರು/ವಿಶೇಷಾಧಿಕಾರಿಗಳು/ಸಂಯೋಜಕರು ಕರಾಅಮವಿವಿ ಪ್ರಾದೇಶಿಕ ಕೇಂದ್ರ ಬೀದರ, ಸ್ನಾತಕೋತ್ತರ ಅಧ್ಯಯನ ಕೇಂದ್ರ ಸಿಂಧನೂರ, ಉಡುತಡಿ ಹಾಗೂ ಮಂಡ್ಯ ಹೊರಾವರಣ ಕೇಂದ್ರ.
3) ಪ್ರಾಂಶುಪಾಲರು ಸಂಯೋಜಿತ ಮಹಿಳಾ ಮಹಾವಿದ್ಯಾಲಯಗಳು ಕರಾಅಮವಿ, ವಿಜಯಪುರ.

ಪ್ರತಿ:

1) ಸಹಾಯಕ ಕುಲಸಚಿವರು ಮಾನ್ಯ ಕುಲಪತಿಗಳ ಆಪ್ತ ಶಾಖೆ ಕರಾಅಮವಿ, ವಿಜಯಪುರ ಮಾಹಿತಿಗಾಗಿ
2) ಕಛೇರಿ ಪ್ರತಿ